**ನಾಡೋಜ ಡಾ. ಮಹೇಶ ಜೋಶಿ**
**ಅಧ್ಯಕ್ಷರು**
ಸಂಚಾರವಾಣಿ : +೯೧ ೯೪೪೮೮೪ ೯೦೩೪೦
+೯೧ ೮೦೭೩೭೦ ೦೬೮೭೪
ಮಿಂಚಂಚೆ : nadojamj@gmail.com

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.
ದೂರವಾಣಿ : ೦೮೦ ೨೬೬೨೩೯೯೧, ೨೬೬೧೨೯೯೧
ದೂರಪತ್ರಕ : ೦೮೦ ೨೬೫೭೩೮೬೫
ಸ್ಥಾಪನೆ : ೧೯೧೫

ಕ್ರಮ ಸಂಖ್ಯೆ: ಕಸಾಪ/ ದಾಖಲೆ /೨೦೨೨-೨೩ ದಿನಾಂಕ: ೦೧-೦೮-೨೦೨೨

**ಶ್ರೀ ಬಿ.ಸಿ. ನಾಗೇಶ ಅವರಿಗೆ,**
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆ ಸಚಿವರು,
ವಿಧಾನಸೌಧ, ಕರ್ನಾಟಕ ಸರ್ಕಾರ,
ಬೆಂಗಳೂರು

ಮಾನ್ಯರೇ,

**ವಿಷಯ : ಮುಧೋಳದಲ್ಲಿರುವ ರನ್ನ ಮಾದರಿ ಕನ್ನಡ ಪ್ರಾಥಮಿಕ ಶಾಲೆಗೆ ತಕ್ಷಣ ಶಿಕ್ಷಕರ ಕೊರತೆ ನೀಗಿಸಲು ಮತ್ತು ಮೂಲ ಸೌಕರ್ಯ ಒದಗಿಸಲು.**

---

೧. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಶಾಲೆಗಳನ್ನು ಉಳಿಸಲು ಮತ್ತು ಬೆಳೆಸಲು ಕಟಿಬದ್ಧವಾಗಿದೆ. ಈ ಕೈಂಕರ್ಯಕ್ಕಾಗಿ ಸರ್ಕಾರ ಕನ್ನಡ ಶಾಲೆಗಳ ಮುಚ್ಚುವಿಕೆ ಅಥವಾ ವಿಲೀನ ತಡೆಗಟ್ಟಲು ಮತ್ತು ಕನ್ನಡ ಶಾಲೆಗೆ ಪೋಷಕರು ಮಕ್ಕಳನ್ನು ಕಳುಹಿಸುವ ವಾತಾವರಣ ನಿರ್ಮಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪರಿಶ್ರಮಿಸುತ್ತಿದೆ.

೨. ಕನ್ನಡ ಶಾಲೆಗಳ ಇಂದಿನ ಸ್ಥಿತಿಯ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಕಳವಳ ಉಂಟಾಗಿದೆ. ಈ ನಿಟ್ಟಿನಲ್ಲಿ ಹಿರಿಯ ಸಾಹಿತಿ **ನಾಡೋಜ ಡಾ. ಎಸ್.ಎಲ್. ಭೈರಪ್ಪ** ಅವರ ನೇತೃತ್ವದಲ್ಲಿ ರಾಜ್ಯದ ಪ್ರಮುಖ ಶಿಕ್ಷಣ ತಜ್ಞರನ್ನು ಒಳಗೊಂಡ "**ಕನ್ನಡ ಶಾಲೆ ಉಳಿಸಿ – ಕನ್ನಡ ಬೆಳೆಸಿ**" ದುಂಡುಮೇಜಿನ ಸಭೆ ನಡೆಸಲಾಗಿದೆ. ಈ ದುಂಡುಮೇಜಿನ ಸಭೆಯಲ್ಲಿ ತಾವೂ ಭಾಗವಹಿಸಿದ್ದೀರಿ. ಈ ಸಭೆಯಲ್ಲಿ ಕನ್ನಡ ಶಾಲೆಗಳಿಗೆ ಮೂಲ ಸೌಕರ್ಯಗಳು, ಶಿಕ್ಷಕರ ನೇಮಕಾತಿ, ಮತ್ತಿತರ ಸೌಲಭ್ಯಗಳನ್ನು ನೀಡುವಂತೆ ಸರ್ಕಾರಕ್ಕೆ ವರದಿ ನೀಡಲಾಗಿದೆ.

೩. ಬಾಗಲಕೋಟೆ ಜಿಲ್ಲೆಯ ಮುಧೋಳವು ಕನ್ನಡದ ಮಹಾಕವಿ ರನ್ನನ ಹುಟ್ಟೂರು. ಕವಿಚಕ್ರವರ್ತಿ ಬಿರುದಾಂಕಿತದ ರನ್ನನ ಹೆಸರಿನಲ್ಲಿ ಮುಧೋಳದಲ್ಲಿ **ರನ್ನ ಮಾದರಿ ಕನ್ನಡ ಪ್ರಾಥಮಿಕ ಶಾಲೆಯಿದೆ.** ಈ ಶಾಲೆಯಲ್ಲಿ ೨೫೦ ಮಕ್ಕಳು ಓದುತ್ತಿದ್ದು, ಕೇವಲ ನಾಲ್ವರು ಶಿಕ್ಷಕರು ಮಾತ್ರ ಬೋಧನಾ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೇ ಈ ಶಾಲೆಯಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು, ಕಟ್ಟಡವೂ ದುಸ್ಥಿತಿಯಲ್ಲಿದೆ. **ಕನ್ನಡಿಗ ಹೆಮ್ಮೆಯ ಮುಧೋಳದ ಕೇಂದ್ರ ಸ್ಥಾನದಲ್ಲಿರುವ ಸರಕಾರಿ ರನ್ನ ಮಾದರಿ ಕನ್ನಡ ಪ್ರಾಥಮಿಕ ಶಾಲೆಯ ಸ್ಥಿತಿ ಶೋಚನೀಯವಾಗಿದೆ. ಇಲ್ಲಿಯ ಮಕ್ಕಳು ಶಿಕ್ಷಣ ವಂಚಿತರಾಗುತ್ತಿದ್ದಾರೆ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಬೇರೆ ಶಾಲೆಗೆ ದಾಖಲಿಸುವ ಆತಂಕವೂ ಇದೆ.**

೪. ಸರ್ಕಾರಿ ರನ್ನ ಮಾದರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಕೊರತೆ ಇರುವುದನ್ನು ಮಾಧ್ಯಮದ ಎದುರು ಇಲ್ಲಿನ ವಿದ್ಯಾರ್ಥಿಗಳು ಹೇಳಿಕೊಂಡಿದ್ದಾರೆ. ಮಹಾಕವಿ ರನ್ನನ ಜನ್ಮಭೂಮಿಯ ಶಾಲೆಯಲ್ಲಿ ಶಿಕ್ಷಕರು ಮತ್ತು ಮೂಲಸೌಕರ್ಯಗಳ ಕೊರತೆ ಇರುವುದು ಹಾಗೂ ಶಾಲಾ ಕಟ್ಟಡ ದುಸ್ಥಿತಿಯಲ್ಲಿರುವುದು ನಾಡಿಗೆ ಶೋಭೆ ತರುವುದಿಲ್ಲ.

೨ನೇ ಪುಟಕ್ಕೆ ...

೫. ತಕ್ಷಣವೇ, **ಮುಧೋಳದ ಸರಕಾರಿ ರನ್ನ ಮಾದರಿ ಪ್ರಾಥಮಿಕ ಶಾಲೆಗೆ ಅಗತ್ಯ ಶಿಕ್ಷಕರನ್ನು ನೇಮಿಸಬೇಕು, ಮೂಲಸೌಕರ್ಯಗಳನ್ನು ಒದಗಿಸಬೇಕು. ದುಸ್ಥಿತಿಯಲ್ಲಿರುವ ಕಟ್ಟಡವನ್ನು ದುರಸ್ತಿಗೊಳಿಸಬೇಕು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಕನ್ನಡ ಶಾಲೆಗೆ ಪೋಷಕರು ಮಕ್ಕಳನ್ನು ಕಳುಹಿಸುವ ಪರಿಸರ ನಿರ್ಮಿಸಬೇಕು** ಎಂದು ಕೋರಿಕೊಳ್ಳುತ್ತಿದ್ದೇನೆ. ತಾವು ಮುತುವರ್ಜಿ ವಹಿಸಿ ಕೂಡಲೇ ಸರ್ಕಾರಿ ರನ್ನ ಮಾದರಿ ಪ್ರಾಥಮಿಕ ಶಾಲೆಯ ಸಮಸ್ಯೆಯನ್ನು ಬಗೆಹರಿಸಲು ಕೋರುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ



**(ನಾಡೋಜ ಡಾ. ಮಹೇಶ ಜೋಶಿ)**

ಅಧ್ಯಕ್ಷರು